ಇರುತ್ತವೆ. ಕೇವಲ ವಿರೋಧ ಪಕ್ಷದವರಿಗೆ ಮಾತ್ರ ಸಮಸ್ಯೆಗಳು ಇರುವಂತಹದಲ್ಲ. ನಮಗೂ ಸಮಸ್ಯೆಗಳು ಉಂಟು.

MR. SPEAKER.—Honble Minister of State for co-operation is making a statement.

ಮಂತ್ರಿಯಂವರಿಂದ ಹೇಳಿಕೆ

ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ

† ಡಾ. ಹೆಚ್ ಆರ್. ರಾಜು (ಸಹಕಾರ ಇಲಾಖೆಯ ರಾಜ್ಯ ಮಂತ್ರಿಗಳು). ಸನ್ಮಾನ್ಯ ಧ್ಯಕ್ಷರೇ ಬೆಳಗ್ಗೆ ನಮ್ಮ ಸದಸ್ಯರಾದಂಥ ವಿ. ಎಸ್. ಆಚಾರ್‌ರವರು ಸಿಸಿಲಿನೇ ನಿಯಮದ ಮೇರೆಗೆ ಒಂದು ಪ್ರಶ್ನೆ ಯನ್ನು ಸೂಚಿಸಿದ್ದರು. ಅದಕ್ಕೆ ಉತ್ತರವನ್ನು ಸಂಜೆ ಹೇಳುತ್ತೇನೆಂದು ನಾನು ಮಾಂಚೆಯೇ ಹೇಳಿಕೊಂಡಿದ್ದೆ. ಅದರ ಪ್ರಕಾರ ಈ ಪ್ರಶ್ನೆಯನ್ನು ಕೊಡುತ್ತಿದ್ದೇನೆ. ೧೯೭೭-೮೮ರಿಂದ ಆದಾಡಲ್ಪಟ್ಟಿದ್ದ ಮಹಾಸಭೆ ಮತ್ತು ಚುನಾವಣೆಗಳನ್ನು ಹಂತಹಂತವಾಗಿ ನಡೆಸುವ ಬಗ್ಗೆ ಈಗಾಗಲೇ ಸರಕಾರದ ಆಜ್ಞೆಯಾಗಿರುವುದು ನಿಜವಾಗಿರುತ್ತದೆ. ಈಗ ಮಳೆಗಾಲವಾಗಿದ್ದು, ಬಹುತೇಕ ಸದಸ್ಯರು ಕೃಷಿ ಕೆಲಸಗಳಲ್ಲಿ ಪಾಲ್ಗೊಂಡಿರುವ ಕಾರಣ ಮಹಾಸಭೆಗಳಲ್ಲಿ ಮತ್ತು ಚುನಾವಣೆಗಳಲ್ಲಿ ಭಾಗವಹಿಸಲು ತೊಂದರೆ ಇರುವುದಾಗಿಯೂ, ಅದರಿಂದ ಮಹಾಸಭೆಗಳನ್ನು ಮತ್ತು ಚುನಾವಣೆಗಳನ್ನು ಸ್ಥಗಿತಗೊಳಿಸಬೇಕೆಂದು ಮನವಿಗಳು ಬಂದಿರುತ್ತವೆ. ಈ ಬಗ್ಗೆ ಅನೇಕ ಶಾಸಕರೂ ಚುನಾವಣೆಗಳನ್ನು ಮುಂದೂಡಬೇಕೆಂದು ಒತ್ತಾಯಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆ ಸರಕಾರದ ತೀವ್ರ ಗಮನದಲ್ಲಿದೆ ಎಂದು ಹೇಳಲು ಇಚ್ಛಿಸುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಡಿಸಿಷನ್ ಏನು ಎಂದೂ ಗೊತ್ತಾಗಲಿಲ್ಲ. ಚುನಾವಣೆ ಮಾಡುತ್ತಾರೋ, ಮುಂದೂಡುತ್ತಾರೋ ಗೊತ್ತಾಗಲಿಲ್ಲ.

ಅಧ್ಯಕ್ಷರು.—ತೀವ್ರ ಗಮನದಲ್ಲಿದೆ ಎಂದು ಹೇಳಿದ್ದಾರೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಶಾಸಕರ ಕಾರಣದಿಂದ ಮುಂದಕ್ಕೆ ಹಾಕಬಾರದು. ನನ್ನ ಒಂದು ಪಾಯಿಂಟ್ ಏನೆಂದರೆ ಶಾಸಕರು ಹೇಳಿರುತ್ತಾರೆ ಎಂದು ಚುನಾವಣೆ ಮುಂದಕ್ಕೆ ಹಾಕಬಾರದು. ಅವರಿಗೆ ಏನಾದರೂ ಟೆಕ್ನಿಕಲ್ ತೊಂದರೆಗಳು ಇದ್ದರೆ ಸರಕಾರ ಚುನಾವಣೆಗಳನ್ನು ಮುಂದಕ್ಕೆ ಹಾಕಲಿ. ಕಾರಣ ಇದೆ ಎಂದು, ಶಾಸಕರು ಹೇಳಿದ್ದಾರೆ ಎಂದು ಮುಂದಕ್ಕೆ ಹಾಕಬಾರದು. ರಿಪೇರಿ ಆಗಲಿಲ್ಲ. ಡಿಫಾಲ್ಟರ್ ಇದ್ದಾರೆ ಎಂಬ ಪಾಯಿಂಟ್ ಮೇಲೆ ಮುಂದೂಡಲಿ. ಸದನ ನಡೆಯುವುದರಿಂದ ಮುಂದೂಡಿದೆ ಎಂದು ಹೇಳುವುದು ಬೇಡ.

ಈ ಬಗ್ಗೆ ನನ್ನ ರಿಕ್ವಿಸ್ಟ್ ಏನೆಂದರೆ ಚುನಾವಣೆ ಮಾಡತ್ತಾರೆಯೇ, ಮಾಡುವುದಿಲ್ಲವೇ ಎಂದು ಗೊತ್ತಾಗಲಿಲ್ಲ. ಒಂದು ವೇಳೆ ಮುಂದೂಡುವುದು ಇದ್ದರೆ ಬೇಗ ತೀರ್ಮಾನ ತೆಗೆದುಕೊಳ್ಳಬೇಕು. ಎಲೆಕ್ಷನ್ಸ್ ಕ್ಯಾಲೆಂಡರ್ ಆಫ್ ಇವೆಂಟ್ಸ್ ತೆಗೆದುಕೊಂಡರೆ ಒಂದೊಂದು ಇನ್‌ಸ್ಟ್ರಕ್ಷನ್‌ಗೆ ಒಂದು ಸಾವಿರ ಎಂದರೂ ಕೋಟಿಗಟ್ಟಲೆ ಹಾಳಾಗುತ್ತದೆ. ಈಗಾಗಲೇ ಅನೇಕ ಸಹಕಾರ ಸಂಘಗಳು ಕೀಲಿ ಹಾಕಿರುತ್ತವೆ. ಇಂಥಹ ಪರಿಸ್ಥಿತಿಯಲ್ಲಿ ಸರಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಲಿ, ಆದರೆ ಇಮ್ಮಿಡಿಯಟ್ ಆಗಿ ತೆಗೆದುಕೊಳ್ಳಲಿ. ಸದನದ ಸದಸ್ಯರ ಮೇಲೆ ಹಾಕುವುದು ಬೇಡ.

ಶ್ರೀ ರುದ್ರಯ್ಯ ಪೂಜಾರಿ.—ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸಹಕಾರ ಸಂಘಗಳಲ್ಲಿ ತಾರೀಖು ನಿಗದಿಯಾಗಿದೆ. ಪಳ್ಳಿಮಟ್ಟದ ಸಹಕಾರ ಸಂಘಗಳು ಈ ತಿಂಗಳ ಕೊನೆಯೊಳಗೆ ತಮ್ಮ ಮಹಾಸಭೆಗಳನ್ನು ಮಾಡಬೇಕೆಂದು ತೀರ್ಮಾನ ಆಗಿದೆ. ತಾಲ್ಲೂಕು ಮಟ್ಟದ ಸಹಕಾರ ಸಂಸ್ಥೆಗಳು ಇಂತಹ ಅವಧಿಯಲ್ಲಿ ಮಾಡಬೇಕೆಂದು ಇದೆ. ಜಿಲ್ಲಾಮಟ್ಟ ರಾಜ್ಯಮಟ್ಟ ಹೀಗೆ ಇದು ಸೆಪ್ಟೆಂಬರ್‌ವರೆಗೆ ಕೂಡಾ ಹೋಗತಕ್ಕಂಥ ಪರಿಸ್ಥಿತಿ ಇದೆ. ಇವತ್ತಿನ ದಿವಸ ನಿನ್ನೆ ತಾರೀಖು. ಈ ತಿಂಗಳೊಳಗೆ ಹಳ್ಳಿಮಟ್ಟದ ಸಹಕಾರ ಸಂಘಗಳ ಮಹಾಸಭೆಗಳನ್ನು ಮಾಡಬೇಕೆಂದು ಸರಕಾರ ಈಗಾಗಲೇ ನಿರ್ದೇಶನ ನೀಡಿದೆ ಎಂಬ ಮಾತನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಇನ್ನೂ ಇದನ್ನು ಡೋಲಾಯಮಾನವಾಗಿ ಇಟ್ಟಿರುವ ಕಾರಣದಿಂದ ಇದು ನಡೆಯುತ್ತದೆಯೇ ಇಲ್ಲವೇ ಎನ್ನುವುದನ್ನೂ ಒಂದು ಮಾತಿನಲ್ಲಿ ಚುಟಕ ಉತ್ತರ ಕೊಟ್ಟರೆ ಆಗುತ್ತದೆ. ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ, ಅನೇಕ ಕಡೆ ರೈತರು ಸಾಲ ವಜಾವಾಗುತ್ತದೆ

ಎಂಬ ಕಾರಣಕ್ಕೋಸ್ಕರ ಶೇಕಡಾ ೯೯ ರಷ್ಟು ಸಾಲ ತೀರುವಳಿ ಮಾಡಿಲ್ಲ. ಅನೇಕ ಸಹಕಾರ ಸಂಘಗಳಲ್ಲಿ ಚುನಾವಣೆಗೆ ನಿಂತುಕೊಳ್ಳುವುದಕ್ಕೆ, ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಅರ್ಹರಾಗಿರತಕ್ಕಂಥ ಅಭ್ಯರ್ಥಿಗಳು ಸಿಗುವುದೇ ಕಷ್ಟವಾಗಿರುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಈ ರೀತಿ ಹೇಳುತ್ತಿದ್ದಾರೆ. ಆದರ ಸಾಧಕ ಬಾಧಕಗಳು ಏನಾದರೂ ಇರಲಿ, ಚುನಾವಣೆ ಮಾಡುತ್ತೇವೆ ಅಥವಾ ಇಲ್ಲ ಎಂದು ಹೇಳಬೇಕು.

ಅಧ್ಯಕ್ಷರು.—ಈ ಎಲ್ಲಾ ಕಾರಣಕ್ಕೋಸ್ಕರವೇ ಅವರು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಪಿ. ಬೈರೇಗೌಡ.—ಪರಿಶೀಲನೆ ಎಂದರೆ ಯಾವಾಗ ಚುನಾವಣೆ ಮಾಡುತ್ತೇವೆ, ಅಥವಾ ಇಲ್ಲ ಎಂದು ಹೇಳಿಬಿಡಲಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೇ, ಈ ಸದನದ ಎರಡೂ ಕಡೆ ಸದಸ್ಯರಲ್ಲಿ ಸಹಿತ ಸಹಕಾರ ಸಂಸ್ಥೆಗಳ ಚುನಾವಣೆಗಳನ್ನು ಯಾವಾಗ ನಡೆಸುತ್ತಾರೆ ಎಂಬ ಬಗ್ಗೆ ತೀವ್ರ ಆತಂಕ ಇದೆ. ನಡೆಸುತ್ತೇವೆ ಎನ್ನುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ನಡೆಸಲಿ. ನಡೆಸುವುದಿಲ್ಲ ಎಂದರೂ ಪರವಾಗಿಲ್ಲ. ಆದರೆ ಸರಕಾರಕ್ಕೆ ನಿರ್ದಿಷ್ಟವಾದ ಒಂದು ಧೋರಣೆ ಇರಬೇಕು. ಮಾನ್ಯ ವೀರಪ್ಪ ಮೊಯಿಲಿಯವರು ಬೆಳಿಗ್ಗೆ ಈ ಸದನದಲ್ಲಿ ತಮ್ಮ ಮಾತಿಂದ ವಾಲಂಟಿಯರ್ ಆಗಿ ಸಾಯಂಕಾಲದ ಒಳಗೆ ಶಿರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಅಧ್ಯಕ್ಷರು.—ಇನ್ನು ಸಾಯಂಕಾಲ ಆಗಿಲ್ಲವಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು. ಈ ಹೇಳಿಕೆಯಲ್ಲಿ ಏನು ವ್ಯತ್ಯಾಸ ಆಗಿದೆ. ಮತ್ತೆ ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೆಂದರೆ, ಮಧ್ಯಾಹ್ನ ವೀರಪ್ಪ ಮೊಯಿಲಿಯವರು ಅವರ ಉತ್ತರದಲ್ಲಿ ಕೊಟ್ಟಿರತಕ್ಕಂಥ ವಿಚಾರಕ್ಕೂ, ಈಗ ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿರ ತಕ್ಕಂಥ ವಿಚಾರಕ್ಕೂ ಏನೂ ವ್ಯತ್ಯಾಸ ಇಲ್ಲ. ಬೆಳಗ್ಗೆನೂ ಪರಿಶೀಲನೆ, ಮಧ್ಯಾಹ್ನನೂ ಪರಿಶೀಲನೆ, ಇವತ್ತೂ ಪರಿಶೀಲನೆ, ನಾಳೆನೂ ಪರಿಶೀಲನೆನಾ ? ಒಂದು ನಿರ್ದಿಷ್ಟವಾಗಿ ಹೇಳಿ.

MR. SPEAKAR.—I think you have not followed him properly. ಬೆಳಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಈಗ ತೀವ್ರವಾಗಿ ಪರಿಶೀಲನೆ ಮಾಡುತ್ತೆವೆಂದು ಹೇಳಿದ್ದಾರೆ. ಅದೇ ಸಾಧಾರಣೆ ಆಗಿರುವುದು.

SRI P. G. R. SCINDHIA.—I have followed him.

ಶ್ರೀ ಪಾಟಿಲ್ ನಾಗರಾಜ್.—ಅವರ ತೀವ್ರವಾಗಿ ಅಂದರೆ ಯಾವಾಗಲೋ ಗೊತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಿಮಗೆ ಈಗಲೇ ಹೇಳಲು ತೊಂದರೆ ಇರಬಹುದು. ಮಾನ್ಯ ಮುಖ್ಯಮಂತ್ರಿಗಳನ್ನು ಕನ್ಸಲ್ಟ್ ಮಾಡಬೇಕಾಗಿರುತ್ತದೆ. ಅವರು ಊರಿನಲ್ಲಿ ಇಲ್ಲ. ಊರಿಗೆ ಬಂದಿದ್ದರೆ ಅವರ ಜೊತೆ ಸಮಾಲೋಚನೆ ಮಾಡಿಯೇ ಹೇಳಿ, ಪರವಾಗಿಲ್ಲ.

ಶ್ರೀ ಪಾಟಿಲ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಊರಿನಲ್ಲಿ ಇದ್ದಾರೆ. ಬಂದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಹಕಾರ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ಸರ್ಕಾರ ಈಗಾಗಲೇ ಒಂದು ದಿನಾಂಕವನ್ನು ಪ್ರಕಟಣೆ ಮಾಡಿರುವುದು ಪತ್ರಿಕೆಗಳಲ್ಲಿ ವರದಿ ಆಗಿದೆ. ಆ ಪ್ರಕಾರ ಬೇರೆ ಬೇರೆ ಸಹಕಾರ ಸಂಘಗಳು ಚುನಾವಣೆಗಳು ಇಷ್ಟೇ ದಿವಸಗಳಲ್ಲಿ ಮುಗಿಯಬೇಕೆಂದು ತಿಳಿದ್ದಾನೆ. ಇದರ ಜೊತೆಗೆ ರಾಜ್ಯದಲ್ಲಿ ರೈತರು ತಮ್ಮ ಸಾಲ ಮನ್ನಾ ಆಗುತ್ತದೆಂದು ಸಾಲ ಕಟ್ಟದೆ ಇರಬಹುದು. ಆಗ ಅಂತಹವರು ಡಿಫಾಲ್ಟರ್ಸ್ ಆಗಿರುವುದರಿಂದ ಅವರು ಚುನಾವಣೆಯಲ್ಲಿ ನಿಲ್ಲುವುದಕ್ಕೆ ಮತ್ತು ಪಂತ ಚಲಾವಣೆಗೆ ಅಧಿಕಾರ ಇಲ್ಲವಂತೆ ಸರ್ಕಾರ ಒಂದು ಆಜ್ಞೆಯನ್ನು ಹೊಡಿದ್ದಾರೆ- ಈ ಒಂದು ಸಂದರ್ಭದಲ್ಲಿ ತಾವು ಈಗ ಕೊಟ್ಟಂತಹ ಒಂದು ಹೇಳಿಕೆಯಲ್ಲಿ ನಿರ್ದಿಷ್ಟವಾಗಿ ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದು ಇಲ್ಲ. ತಾವು ಕೊಟ್ಟ ಉತ್ತರ ಅದು ಉತ್ತರ ಆಗುವುದಿಲ್ಲ. ಈಗಾಗಲೇ ಸಹಕಾರ ಸಂಘಗಳು ಹಣಕಾಸಿನ ತೊಂದರೆಯನ್ನು ಅನುಭವಿಸುತ್ತಿವೆ. ತಾಕತ್ತಿಗೆ ಚುನಾವಣೆ ಎದುರಿಸುವ ಶಕ್ತಿ ಇದ್ದರೆ ಮಾಡಿ, ತಮಗೆ ಕಳಕಳಿ ಇದ್ದರೆ ಮಾಡಿ ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ, ಚುನಾವಣೆಯನ್ನು ಏತಕ್ಕೆ ಮುಂದಕ್ಕೆ ಹಾಕುತ್ತೀರಿ...

ಶ್ರೀ ವಿಜಯಕುಮಾರ ಸೊರಕೆ.—ಚುನಾವಣೆ ನಡೆಸುವುದಕ್ಕೆ ನಮಗೆ ಶಕ್ತಿ ಇದೆ. ಧೈರ್ಯ ಇದೆ. ಹೆದರಿಕೆ ಇಲ್ಲ...

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೇನು ಅನ್ ಪಾರ್ಲಿಮೆಂಟರಿ ಪದ ಮಾತನಾಡಲಿಲ್ಲ. ನಿಮಗೆ ಶಕ್ತಿ ಇದ್ದರೆ ಚುನಾವಣೆ ಮಾಡಿ ಇಲ್ಲದಿದ್ದರೆ ಬೇಡ ಎಂದು ಹೇಳಿದೆ. ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥಾದ್ದರಲ್ಲಿ ಅರ್ಥವಿಲ್ಲ. ನೀವು ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ಇಲ್ಲಾ ಈಗ ಮಳೆಗಾಲ ಇದೆ ರೈತರಿಗೆ ತೊಂದರೆಯಾಗುತ್ತದೆ ಅದಕ್ಕೆ ಮುಂದಕ್ಕೆ ಹಾಕುತ್ತೇವೆ, ಮುಂದೆ ಇಂತಹ ದಿನ ಚುನಾವಣೆ ಮಾಡುತ್ತೇವೆಂದು ಹೇಳಿಕೆ ಕೊಡಿ.

(ಗೊಂದಲ)

ಶ್ರೀ ಎಚ್. ಆರ್. ರಾಜು.—ಮಾನ್ಯ ಹಿರಿಯ ಸದಸ್ಯರ ಸಲಹೆ ಒಳ್ಳೆಯದಾ ಇದೆ. ಅದಷ್ಟು ಬೇಗ ಈ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಒಂದೆರಡು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಿಮ್ಮ ಲೆಜಿಸ್‌ಲೇಟರ್ಸ್ ಪಾರ್ಟಿ ವಿಷಾಚಿಂಗ್‌ನಲ್ಲಿ ಕನ್ಸೆಲ್ಟ್ ಮಾಡಿ ಹೇಳಬೇಕಾಗುತ್ತದೆ. ಕನ್ಸಲ್ಟ್ ಮಾಡಿಯೇ ಹೇಳಿ, ಪರವಾಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರಿ ಸಚಿವರು ಅದಷ್ಟು ಬೇಗ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕು. ಸರ್ಕಾರದ ಆಜ್ಞೆ ಪ್ರಕಾರ ಜೂನ್ ೩೦ನೇ ತಾರೀಖಿನೊಳಗೆ ಎಲ್ಲ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆ ಆಗಬೇಕು. ಜನರಲ್ ಬಾಡಿ ವಿಷಾಚಿಂಗ್ ಕರೆಯಬೇಕಾದರೆ ೧೫ ದಿವಸಗಳ ಮೊದಲು ನೋಟೀಸ್ ಕೊಡಬೇಕು. ನೀವು ಒಂದೆರಡು ದಿನಗಳ ಒಳಗಾಗಿ ಒಂದು ನಿರ್ಧಾರ ತೆಗೆದುಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ತೊಂದರೆಯಾಗುತ್ತದೆ ಅದಕ್ಕೆ ಏನಾದರು ಒಂದು ನಿರ್ಧಾರ ಬೇಗ ತೆಗೆದುಕೊಳ್ಳಿ. Suppose they take a decision on 15th, they would have spent a lot of money. At least, they should take a decision before 14th.

MR. SPEAKER.—I think the Government is aware of the pros and cons of it.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಕಾಲದಲ್ಲಿಯೂ ಆ ಪ್ರಕಾರ ಆಗಿದೆ. ನಾವು ಸಹ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೆವೆ. ನಮ್ಮ ವಿರೋಧಪಕ್ಷದ ನಾಯಕರು ಸಹ ಹೇಳಿದ್ದಾರೆ. ಒಂದು ವೇಳೆ ಡಿಪಾರ್ಟ್‌ರ್ಸ್ ಇದ್ದರೆ ಎಲೆಕ್ಷನ್‌ಗೆ ಸರಿಯಾದ ಕ್ಯಾಂಡಿಡೆಟ್ಸ್ ಸಿಗುವುದಿಲ್ಲ. ಇವುಗಳನ್ನೆಲ್ಲಾ ವಿಚಾರ ಮಾಡಿ ಎಂದು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ದಯವಿಟ್ಟು ತಾವು ನಾಳೆ ಅಥವಾ ನಾಡಿದ್ದು ಒಂದು ನಿರ್ಧಾರ ತೆಗೆದುಕೊಂಡರೆ ಸಹಕಾರ ಸಂಘಗಳಿಗೆ ಹಾನಿಯಾಗುವುದಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳ ಮೇಲಿನ ಚರ್ಚೆ ಇವತ್ತು ಮುಕ್ತಾಯವಾಗಬೇಕು. ನಾಳೆ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡತಕ್ಕವರಿದ್ದಾರೆ. ಆದರೆ ಬಹಳ ಜನ ಸದಸ್ಯರು ತಮ್ಮ ಹೆಸರುಗಳನ್ನು ಕೊಟ್ಟು ನಾವು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳಿದ್ದಾರೆ. ಆದ್ದರಿಂದ ವಿಧಿಯಿಲ್ಲದೆ ನಾನು ಕಾಲದ ಮಿತಿಯನ್ನು ಪ್ರತಿ ಸದಸ್ಯರಿಗೂ ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಸದಸ್ಯರೆ ಮಿತಿ ಹಾಕಿಕೊಂಡರೆ ಒಳ್ಳೆಯದು. ಈಗ ಹರ್ಷಕುಮಾರ ಗೌಡ, ತಾವು ಮಾತನಾಡಿ.

† ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಈ ಸದನದ ಮುಂದೆ ರಾಜ್ಯದ ನಗರಾಭಿವೃದ್ಧಿ ಮಂತ್ರಿಗಳು ಯಾವ ಇಲಾಖಾ ಬೇಡಿಕೆಗಳನ್ನು ಮಂಡಿಸಿದ್ದಾರೋ ಅದನ್ನು ನಾನು ಅನುಮೋದಿಸುತ್ತಾ ಈ ಒಂದು ನಗರದ ನಾಗರೀಕರ ಸಮಸ್ಯೆಗಳ ಬಗ್ಗೆ ನನ್ನ ರಚನಾತ್ಮಕವಾದ ಸಲಹೆಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ವ್ಯಕ್ತಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಪ್ರಥಮವಾಗಿ ಯಾವ ನಗರದ ಬಹುತೇಕ ಮಹಾ ಜನತೆಯು ಅತ್ಯಾವಶ್ಯಕ ಅಪಶ್ಯಕತೆಗಳು ಏನಿವೆ, ಅವುಗಳಲ್ಲಿ ಪ್ರಮುಖವಾದ ನೀರು, ವಸತಿ ಮುಂತಾದ ಸಮಸ್ಯೆಗಳ ಬಗ್ಗೆ ಹಲವಾರು ರೀತಿಯಲ್ಲಿ ಅಂದರೆ ವೈಜ್ಞಾನಿಕರೀತಿಯಲ್ಲಿ ಯೋಜನಾಬದ್ಧವಾದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ನಗರದ ಜನತೆಯು ಈ ಅವಶ್ಯಕತೆಗಳನ್ನು ಪೂರೈಸುವಂಥ ಪ್ರಾಮಾಣಿಕ ಪ್ರಯತ್ನ ಮಾತುವುದರತ್ತ ಈ ಇಲಾಖೆ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಈ ಸಭೆಯ ಮೂಲಕ